ವಿಷಯ :- ಹೌಸಿಂಗ್ ಬೋರ್ಡ್‌ನ ಕಳಪೆ ಮನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 880 (1696)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ, (ಕುಂದಾಪುರ) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1-1-95 ರಿಂದ ರಾಜ್ಯದಲ್ಲಿ ಹೌಸಿಂಗ್ ಬೋರ್ಡ್‌ರವರಿಂದ ಕಳಪೆ ಮನೆ ಕಟ್ಟಲು ಕಾರಣರಾದ ಎಷ್ಟು ಜನ ಇಂಜಿನಿಯರ್ ಮತ್ತು ಗುತ್ತಿಗೆದಾರರು ಆರೋಪ ಹೊಂದಿರುತ್ತಾರೆ.

ಆ) ಎಷ್ಟು ಜನ ಇಂಜಿನೀಯರ್‌ರ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :-

ಅ) ದಿನಾಂಕ 1-1-95 ರಿಂದ ರಾಜ್ಯದಲ್ಲಿ ಗೃಹ ಮಂಡಳಿಯವರಿಂದ ಕಳಪೆ ಮನೆ ಕಟ್ಟುವ ಬಗ್ಗೆ ಇಬ್ಬರು ಇಂಜಿನೀಯರ್‌ಗಳ ಮೇಲೆ ಆರೋಪ ಇದೆ.

ಆ) ಕಳಪೆ ಗುಣಮಟ್ಟದ ಮನೆ ನಿರ್ಮಾಣಕ್ಕಾಗಿ ಇಬ್ಬರೂ ಇಂಜಿನೀಯರ್‌ಗಳ ಮೇಲೆ ಇಲಾಖಾ ವಿಚಾರಣೆ ನಡೆಸಲಾಗುತ್ತಿದೆ.

ವಿಷಯ :- ಜಿಲ್ಲಾ ಪುನರ್ ವಿಂಗಡಣೆ ಸಮಿತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 882 (1148)

ಶ್ರೀ ಡಿ. ಆರ್. ಪಾಟೀಲ್ (ಗದಗ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಜಿಲ್ಲೆಗಳ ಪುನರ್ ವಿಂಗಡನೆ ಕುರಿತು ನೇಮಕ ಮಾಡಿದ್ದ ಮೂರು ಸಮಿತಿಗಳು ವರದಿ ನೀಡಿದ್ದರೂ ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್ ವಿಂಗಡಣೆಗೆ ಇರುವ ತೊಂದರೆಗಳಾವುವು.

(ಆ) ಜಿಲ್ಲೆ ಪುನರ್ ವಿಂಗಡಣೆ ಕುರಿತು ನೇಮಕ ಮಾಡಲಾದ (1) ವಾಸುದೇವ ರಾವ್, (2) ಹುಂಡೇಕರ್ (3) ಗದ್ದಿಗೌಡರ್ ಸಮಿತಿಗಳು ಗದಗ್‌ನ್ನು ಜಿಲ್ಲೆಯ ಕೇಂದ್ರ ವನ್ನಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದು ಗದಗ್‌ನ್ನು ಜಿಲ್ಲಾ ಕೇಂದ್ರವನ್ನಾಗಿ ಯಾವಾಗ ಮಾಡಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :-

(ಅ) ಜಿಲ್ಲಾ ಪುನರ್-ವಿಂಗಡಣೆ ಆದಲ್ಲಿ ಆಗಬಹುದಾದ ಆಡಳಿತಾತ್ಮಕ ಹಾಗೂ ಆರ್ಥಿಕ ಪರಿಣಾಮಗಳು ಮತ್ತು ಆಗು-ಹೋಗುಗಳ ಬಗ್ಗೆ ವಿಭಾಗಾಧಿಕಾರಿಗಳು ಮತ್ತು

ಆರ್ಥಿಕ ಇಲಾಖೆ ಹಾಗೂ ಯೋಜನಾ ಇಲಾಖೆಗಳನ್ನು ಸಂಪರ್ಕಿಸಿ ಮಾಹಿತಿಗಳನ್ನು ಪಡೆಯಲಾಗುತ್ತಿದೆ. ಈ ಮಾಹಿತಿಗಳು ಲಭ್ಯವಾದ ನಂತರ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.

ಅ) ವಿಷಯ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆಯಾದ್ದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಧಾರವಾಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಸಹಕಾರ ಸಂಘಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 883 (1147)

ಶ್ರೀ ಡಿ. ಆರ್. ಪಾಟೀಲ್ (ಗದಗ್) :- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಆಡಳಿತಾಧಿಕಾರಿಗಳ ನಿರ್ವಹಣೆಯಲ್ಲಿರುವ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಿಷ್ಟು? ಅವುಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲು ಕಾರಣ ಗಳೇನು (ತಾಲ್ಲೂಕುವಾರು ವಿವರ ನೀಡುವುದು)

ಆ) ಇವುಗಳಲ್ಲಿ ಮುಂಗಾರು ಕಾಲದಲ್ಲಿ ಧಾರವಾಡ ಜಿಲ್ಲೆಯಲ್ಲಿ ಪತ್ತು ಮಂಜೂರಿ ಮಾಡಿ ಹಣ ಬಿಡುಗಡೆ ಮಾಡದಿರುವ ಸಂಘಗಳು ಎಷ್ಟು?

ಇ) ತಮ್ಮ ಈ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲರಾದ ಸಂಘಗಳ ಆಡಳಿತಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೇ? ವಿವರ ನೀಡುವುದು.

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) :-

ಅ) ಧಾರವಾಡ ಜಿಲ್ಲೆಯಲ್ಲಿ ಆಡಳಿತಾಧಿಕಾರಿ ನಿರ್ವಹಣೆಯಲ್ಲಿ ಎರಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಿವೆ.

ಕ್ರಮ ಸಂಖ್ಯೆ	ತಾಲ್ಲೂಕು	ಕಲಂ 30(1) ರಲ್ಲಿ ಆಡಳಿತಾಧಿಕಾರಿಗಳ ನಿರ್ವಹಣೆಯಲ್ಲಿರುವ ಸಂಘಗಳು
1.	ಧಾರವಾಡ	-
2.	ಹುಬ್ಬಳ್ಳಿ	-
3.	ಕಲಘಟಗಿ	1